

بِسۡمِ اللّٰہِ الرَّحۡمٰنِ الرَّحِیۡمِ

# ಯನ್‌ಸುರುಕ ರಿಜಾಲುನ್ ನೂಹೀ ಇಲೈಹಿಂ ಮಿನಸ್ಸಮಾಅ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 07-07-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಪ್ರವಾದಿಗಳ ಚರಿತ್ರೆಯಲ್ಲಿ ನಾವು ಕಾಣುತ್ತೇವೆ, ಅವರು ವಾದಿಸಿದ ನಂತರ ಅವರನ್ನು ಜನರು ವಿರೋಧಿಸುತ್ತಾರೆ. ಅವರು ಸ್ಥಾಪಿಸಿದ ಜಮಾಅತ್ ಅಭಿವೃದ್ಧಿಗೊಂಡು ಹರಡುತ್ತಾ ಇರುವಾಗ ವಿರೋಧ ಮತ್ತು ಅಸೂಯೆಯ ಬೆಂಕಿ ಪ್ರಜ್ವಲಿಸಲು ಪ್ರಾರಂಭವಾಗುತ್ತದೆ. ಆದರೆ ಪ್ರವಾದಿಗಳು ಅಲ್ಲಾಹನಿಂದ ಕಳುಹಿಸಲ್ಪಟ್ಟವರಾದ ಕಾರಣ ಅವರಿಗೆ ನೀಡಲ್ಪಟ್ಟ ಅಭಿವೃದ್ಧಿಯ ವಾಗ್ದಾನಗಳ ಮತ್ತು ಶುಭವಾರ್ತೆಗಳ ಕಾರಣದಿಂದ ಯಾವುದೇ ವಿರೋಧವು ಅವರನ್ನು ಅಭಿವೃದ್ಧಿಯ ಮಾರ್ಗದಿಂದ ತಡೆಗಟ್ಟುವಂತಹದಾಗುವುದಿಲ್ಲ. ಅಭಿವೃದ್ಧಿಯನ್ನು ತಡೆಗಟ್ಟಲು ವಿರೋಧಿಗಳಿಗೆ ಸಾಧ್ಯವೂ ಆಗಲಾರದು. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಮಸೀಹ್ ಮತ್ತು ಮಹ್‌ದಿಯಾಗಿ ನಿಯೋಜಿಸಿ ಕಳುಹಿಸಿರುವುದರಿಂದ, ಅಲ್ಲಾಹನು ತನ್ನ ನಡೆವಳಿಕೆ ಪ್ರಕಾರ ಅವರೊಂದಿಗೆ ಸಹ ಇದೇ ರೀತಿ ವರ್ತಿಸುತ್ತಿದ್ದಾನೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವರು ಜನರಿಂದ ವಿರೋಧಿಸಲ್ಪಡುವ ಬಗ್ಗೆ ಮುಂಚಿತವಾಗಿ ತಿಳಿಸಿದ್ದನಲ್ಲದೆ ವಿರೋಧಿಗಳು ಅಂತಿಮವಾಗಿ ಹೊಂದುವ ಪರಾಭವ ಮತ್ತು ವಿರೋಧಿಸಲ್ಪಟ್ಟರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್ ಅಭಿವೃದ್ಧಿ ಗಳಿಸುವ ಬಗ್ಗೆ ಮತ್ತು ಅವರಿಗೆ ಅಲ್ಲಾಹನ ಸಹಾಯ ದೊರಕುವ ಬಗ್ಗೆ ಮುಂಚಿತವಾಗಿ ತಿಳಿಸಿದ್ದನು. ಅಲ್ಲಾಹನು ಅವರೊಂದಿಗೆ ಹೇಳಿದನು: **ಮೈಂ ತೇರೇ ಖಾಲಿಸ್ ಔರ್ ದಿಲೀ ಮುಹಿಬ್ಬೋಂ ಕಾ ಗುರೂಹ್ ಭೀ ಬಡಾವೂಂಗಾ.** (ನಿನ್ನನ್ನು ಹೃತ್ಪೂರ್ವಕವಾಗಿ ಪ್ರೀತಿಸುವ ನಿಷ್ಠಾವಂತರ ಗುಂಪನ್ನು ನಾನು ವರ್ಧಿಸುವೆನು).

ಇನ್ನೊಂದು ಇಲ್‌ಹಾಮ್‌ನಲ್ಲಿ ಅಲ್ಲಾಹನು ಹೇಳಿದನು: **ಯನ್‌ಸುರುಕ ರಿಜಾಲುನ್ ನೂಹೀ ಇಲೈಹಿಮ್ ಮಿನಸ್ಸಮಾಇ.** (ನಾವು ಆಕಾಶದಿಂದ ಇಲ್‌ಹಾಮ್ ಅವತೀರ್ಣಗೊಳಿಸುವ ಜನರು ನಿನಗೆ ಸಹಾಯ ನೀಡುವರು). **ಮೈಂ ತುಝೆ ಇಝ್ಝತ್ ದೂಂಗಾ ಔರ್ ಬಡಾವೂಂಗಾ.** (ನಾನು ನಿನಗೆ ಗೌರವ ನೀಡುವೆನು. ನಿನ್ನ ಜಮಾಅತನ್ನು ವರ್ಧಿಸುವೆನು). ಇನ್ನೊಂದು ಇಲ್‌ಹಾಮ್ ಹೀಗಿದೆ: **ಯನ್‌ಸುರುಕಲ್ಲಾಹು ಮಿನ್ ಇನ್‌ದಿಹೀ.** (ಅಲ್ಲಾಹನು ತನ್ನ ಕಡೆಯಿಂದ ನಿನಗೆ ನೆರವು ನೀಡುವನು).

ತಬ್ಲೀಗ್ ಬಗ್ಗೆ ಅಲ್ಲಾಹನು ಹೀಗೆ ವಾಗ್ದಾನ ಮಾಡಿದನು: **ಮೈಂ ತೇರೀ ತಬ್ಲೀಗ್‌ಕೋ ಝಮೀನ್‌ಕೆ ಕಿನಾರೋಂ ತಕ್ ಪಹುಂಚಾವುಂಗಾ.** (ನಾನು ನಿನ್ನ ಸಂದೇಶವನ್ನು ಲೋಕದ ಎಲ್ಲೆಗಳ ತನಕ ತಲಪಿಸುವೆನು). ಇನ್ನೊಂದು ಇಲ್‌ಹಾಮ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದನು: **ಕತಬಲ್ಲಾಹು ಲಅಗ್‌ಲಿಬನ್ನ ಅನ ವ ರುಸುಲೀ.** (ಅಲ್ಲಾಹನು ಬರೆದಿಟ್ಟಿದ್ದಾನೆ: ನಾನು ಮತ್ತು ನನ್ನ ಸಂದೇಶವಾಹಕರು ನಿಶ್ಚಯವಾಗಿಯೂ ಜಯಶಾಲಿಗಳಾಗುವರು). ಇವುಗಳೆಲ್ಲ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಬರೇ ಬಾಯಿಮಾತುಗಳಲ್ಲ (ನಊದು಼ಬಿಲ್ಲಾಹ್). ಅವು ಅಲ್ಲಾಹನು ಪ್ರತಿ ಪ್ರವಾದಿಯ ಕಾಲಘಟ್ಟದಲ್ಲಿ ಮಾಡಿ ತೋರಿಸುವ ವಾಗ್ದಾನಗಳಾಗಿವೆ. ಪ್ರವಾದಿಗಳ ವಿರೋಧಿಗಳ ಕುತಂತ್ರಗಳನ್ನು ವಿರೋಧಿಗಳ ಮೇಲೆಯೆ ಮರಳಿಸಿ ಪ್ರವಾದಿಗೆ ತನ್ನ ಸಹಾಯದ ದೃಶ್ಯಗಳನ್ನು ಅಲ್ಲಾಹನು ಪ್ರಕಟಿಸುತ್ತಾನೆ.

ಕೆಲವೊಮ್ಮೆ ಜನರಿಗೆ ಅಲ್ಲಾಹನು ಸ್ವತಃ ಮಾರ್ಗದರ್ಶನ ನೀಡಿ ಅಹ್ಮದಿಯ್ಯತ್ತಿನ ಸತ್ಯತೆಯನ್ನು ಪ್ರಕಟಿಸುತ್ತಿದ್ದಾನೆ. ಕೆಲವೊಮ್ಮೆ ಅನ್ಯರ ಆಕ್ರಮಣಗಳಿಂದ ಅಹ್ಮದಿಯರನ್ನು ರಕ್ಷಿಸಬೇಕು ಎಂಬ ಭಾವನೆಯನ್ನು ಅಹ್ಮಯೇತರ ಜನರ ಹೃದಯದಲ್ಲಿ ಹುಟ್ಟಿಸುತ್ತಾ ಇರುತ್ತಾನೆ. ಈಗ ನಾನು ವಿರೋಧಿಗಳ ಅಂತಿಮ ದುರ್ಗತಿಗೆ ಸಂಬಂಧಿಸಿದ ಕೆಲವು ಘಟನೆಗಳನ್ನು ವಿವರಿಸುವೆನು.

ಖಾದಿಯಾನಿನ ನಾಝಿರ್ ದಅ್‌ವತ್ ಇಲಲ್ಲಾಹ್ ಬರೆಯುತ್ತಾರೆ: ಅವರ ಒಬ್ಬ ಮುಅಲ್ಲಿಮ್ ಇಸ್‌ಹಾಖ್ ಸಾಹಿಬ್ ರಮಝಾನ್ ತಿಂಗಳಿಗೆ ಸಮೀಪದ ಕಾಲದಲ್ಲಿ ತನ್ನ ಗ್ರಾಮಕ್ಕೆ ಸಮೀಪದ ಇನ್ನೊಂದು ಗ್ರಾಮದ ತನ್ನ ಸಂಬಂಧಿಕರ ಮನೆಗೆ ಹೋಗಿದ್ದರು. ಅಲ್ಲಿ ಅವರು ರಮಝಾನಿನ ಉಪವಾಸದ ಕಾಲ ಮತ್ತು ಅದರ ಮಹತ್ವದ ಬಗ್ಗೆ ವಿವರಿಸುತ್ತಾ ಇದ್ದಾಗ ಇಖ್‌ಬಾಲ್ ಎಂಬ ಒಬ್ಬ ಅಹ್ಮದಿಯೇತರ ಯುವಕ ಅಲ್ಲಿಗೆ ಬಂದನು. ಅವನು ಮುಅಲ್ಲಿಮರ ಮಾತುಗಳನ್ನು ಸ್ವಲ್ಪ ಕಾಲ ಆಲಿಸಿ ಅವರು ಯಾರು? ಎಂದು ಮನೆಯವರನ್ನು ಕೇಳಿದನು. ಮುಅಲ್ಲಿಮರ ಸಂಬಂಧಿಕರು ಸ್ಪಷ್ಟವಾಗಿ ಅವರು ಯಾರೆಂದು ಹೇಳಲಿಲ್ಲ. ಆದರೆ ಮುಅಲ್ಲಿಮ್ ತಾನು ಯಾರೆಂದು ಸ್ಪಷ್ಟವಾಗಿ ಹೇಳಿದರು. ನಾನು ಅಹ್ಮದಿಯಾ ಜಮಾಅತಿನ ಮುಅಲ್ಲಿಮ್ ಆಗಿದ್ದೇನೆ ಎಂದು ಹೇಳಿದರು. ಆಗ ಆ ವ್ಯಕ್ತಿ ಬಹಳ ರೋಷಾನ್ವಿತನಾದನು. ಮುಅಲ್ಲಿಮ್ ಅವನಿಗೆ ವಿವರಣೆ ನೀಡಿ ಅವನ ತಪ್ಪು ಗ್ರಹಿಕೆಗಳನ್ನು ನಿವಾರಿಸಲು ಬಯಸಿದ್ದರು. ಆದರೆ ಆತ ಅವರ ಮಾತನ್ನು ಆಲಿಸಲು ಸಿದ್ಧನಿರಲಿಲ್ಲ. ಮುಅಲ್ಲಿಮ್ ಸಾಹೇಬರು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರು ಉಚ್ಚರಿಸಿದಾಗ ಇಖ್‌ಬಾಲ್ ಹೇಳುತ್ತಾ ಇದ್ದ: ನೀವು ಈ ಹೆಸರುಗಳನ್ನು ಬಳಸಬಾರದೆಂದು. ಪಾಕಿಸ್ಥಾನೀ ಮೌಲವಿಗಳ ಪ್ರಭಾವದ ಕಾರಣದಿಂದ ಆತ ಆ ರೀತಿ ಹೇಳುತ್ತಿದ್ದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೆಸರು ಹೇಳಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಮತ್ತು ಜಮಾಅತನ್ನು ಕೊಳಕು ಪದಗಳನ್ನು ಬಳಸಿ ಬೈಯ್ಯುತ್ತಿದ್ದನು. ಅವನು ಹೇಳಿದನು:

ನಾನು ಸೌದಿ ಅರೇಬಿಯಾ, ಬಹರೈನ್, ಖತರ್ ಮೊದಲಾದ ದೇಶಗಳಿಗೆ ಹೋಗಿ ಬಂದಿದ್ದೇನೆ. ನಿಮ್ಮ ಬಗ್ಗೆ ನನಗೆ ಎಲ್ಲವೂ ತಿಳಿದಿದೆ. ಎಲ್ಲ ಇಸ್ಲಾಮೀ ದೇಶಗಳೂ ನಿಮ್ಮ ವಿರುದ್ಧ ಫತ್ವ ನೀಡಿವೆ. ಮಾರ್ಗದಲ್ಲಿ ಸರ್ಪ ಮತ್ತು ಖಾದಿಯಾನಿಯನ್ನು ಕಂಡರೆ ಸರ್ಪವನ್ನು ಬಿಟ್ಟುಬಿಡಿರಿ, ಖಾದಿಯಾನಿಯನ್ನು ಕೊಲ್ಲಿರಿ ಎಂದು ಹೇಳಲಾಗಿದೆ. ಈಗ ನನಗೆ ಉತ್ತಮ ಸಂದರ್ಭ ಲಭಿಸಿದೆ. ಒಬ್ಬ ಖಾದಿಯಾನಿಯನ್ನು ಕೊಂದು ಪುಣ್ಯ ಸಂಪಾದಿಸಲು ಎಂದು ಹೇಳಿದನು. ಮುಅಲ್ಲಿಮ್ ಹೇಳುತ್ತಾರೆ: ನಾನು ಬಹಳ ಸಹನೆಯಿಂದ ಆತನ ಮಾತುಗಳನ್ನು ಆಲಿಸಿದೆನು. ಆದರೆ ಅವನು ತನ್ನ ಬೈಗಳ ಮಾತುಗಳನ್ನು ವರ್ಧಿಸಿದಾಗ ನಾನು ಹೇಳಿದೆ– ನಾನು ಅಹ್ಮದಿಯಾ ಜಮಾಅತಿನ ಮುಅಲ್ಲಿಮ್ ಆಗಿರದಿದ್ದರೆ ನಿಮ್ಮ ಹೊಡೆತ ಬಡಿತದಲ್ಲಿ ನಾನು ಸಹ ಸೇರುತ್ತಿದ್ದೆ. ಆದರೆ ನಮಗೆ ನೀಡಲ್ಪಟ್ಟ ಉಪದೇಶ, ಬೈಗಳಿಗೆ ಬದಲಾಗಿ ಬೈಯಬಾರದೆಂದೂ ಅವರ ಪರವಾಗಿ ಪ್ರಾರ್ಥಿಸಬೇಕೆಂದೂ ಆಗಿದೆ. ಆದುದರಿಂದ ನಾನು ನಿಮಗೆ ಉತ್ತರವಾಗಿ ಏನೂ ಹೇಳುವುದಿಲ್ಲ. ಆಗ ಅವನು ಮೌನವಾದನು. ಆದರೆ ಅನಂತರ ಹೀಗೆ ಎಚ್ಚರಿಕೆ ನೀಡಿದನು: ಇನ್ನು ಮುಂದೆ ಈ ಗ್ರಾಮದಲ್ಲಿ ನೀನು ಕಾಣಿಸಿಕೊಂಡರೆ ನಿನ್ನ ಗತಿ ಬಹಳ ಕೆಟ್ಟದಾಗುವುದು ಎಂದು ಹೇಳಿದ. ಮುಅಲ್ಲಿಮ್ ಹೇಳುತ್ತಾರೆ: ನಾನು ಆತನೊಂದಿಗೆ ಇಷ್ಟು ಮಾತ್ರ ಹೇಳಿದೆ– ಯಾರ ಗತಿ ಕೆಟ್ಟದಾಗುವುದೆಂದು ಕಾಲವು ತೋರಿಸುವುದು. ಅನಂತರ ನಾನು ಅಲ್ಲಿಂದ ಎದ್ದು ಬಂದೆನು.

ಇಖ್‌ಬಾಲ್ ಎಂಬ ಆ ವ್ಯಕ್ತಿ ಹತ್ತಿರದ ಗ್ರಾಮಗಳಲ್ಲಿರುವ ಅಹ್ಮದಿಯರೊಂದಿಗೆ ಖಾದಿಯಾನಿಯತ್ತನ್ನು ಬಿಟ್ಟುಬಿಡಿರಿ ಎಂದು ಹೇಳುತ್ತಿದ್ದನು. ಆದರೆ ಯಾರೂ ಅವನ ಮಾತಿಗೆ ಲಕ್ಷ್ಯ ನೀಡುತ್ತಿರಲಿಲ್ಲ. ಮುಅಲ್ಲಿಮ್ ಹೇಳುತ್ತಾರೆ: ರಮಝಾನ್ ನಂತರ ಹದಿನೈದು ದಿನಗಳ ರಜೆ ಪಡೆದು ನಾನು ಊರಿಗೆ ಮರಳಿದೆ. ಅಲ್ಲಿ ಒಬ್ಬ ಹಿರಿಯ ಮಹಿಳೆ ನನ್ನೊಂದಿಗೆ ಹೇಳಿದರು: ಜಮಾಅತನ್ನು ಬೈಯ್ಯುತ್ತಾ ಇದ್ದ ಮೌಲವಿ ಇಖ್‌ಬಾಲ್ ಅಚಾನಕವಾಗಿ ಹೃದಯ ಸ್ತಂಭನದಿಂದ ಮೃತನಾಗಿದ್ದಾನೆ ಎಂದು. ಈ ಘಟನೆ ಅಹ್ಮದಿಯರ ವಿಶ್ವಾಸವನ್ನು ವರ್ಧಿಸಿತಲ್ಲದೆ ಈ ಚಿಕ್ಕ ಗ್ರಾಮದ ಅಹ್ಮದಿಯೇತರ ಜನರು ಸಹ ಬಹಳ ಪ್ರಭಾವಿತರಾಗಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ನೀಡಿದ ನೆರವನ್ನು ಅವರು ಕಂಡರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಹೀನೈಸಿದವರು ಹೀನಾಯಗೊಳಿಸಲ್ಪಟ್ಟದ್ದನ್ನು ಅವರು ಕಂಡರು.

ಲೌಕಿಕ ಅಭಿವೃದ್ಧಿ ಗಳಿಸಿದ ಕಾರಣದಿಂದ ಜನರು ಧರ್ಮದಿಂದ ದೂರ ಸರಿಯುತ್ತಾ ಇರುವುದನ್ನು ನಾವು ಕಾಣುತ್ತಿದ್ದೇವೆ. ಆದರೆ ಲೋಕದಲ್ಲಿ ಎಂತಹ ಜನರು ಸಹ ಇದ್ದಾರೆಂದರೆ ಅವರು ಧರ್ಮದ ಬಗ್ಗೆ ಆಸಕ್ತಿ ಹೊಂದಿದ್ದಾರೆ. ನೇರಮಾರ್ಗ ಯಾವುದೆಂದು ಅನ್ವೇಷಿಸುತ್ತಿದ್ದಾರೆ. ಅಲ್ಲಾಹನು ಅವರ ಮನೋಭಾವವನ್ನು ಅರಿತುಕೊಂಡು ಈ ಕಾಲಘಟ್ಟದ ಇಮಾಮರನ್ನು ನಂಬಲು ಅವರ ಹೃದಯಗಳನ್ನು ತೆರೆಯುತ್ತಾನೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿರುವುದು ಜನರು ಅವರನ್ನು ನಂಬಲಿಕ್ಕೋಸ್ಕರವಾಗಿದೆ. ಆದುದರಿಂದ ಜನರು ಅಲ್ಲಾಹನ ಅನುಗ್ರಹದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುತ್ತಾ ಇದ್ದಾರೆ.

ಐವರಿಕೋಸ್ಟ್ ದೇಶದ ಮುಬಲ್ಲಿಗ್ ಬರೆಯುತ್ತಾರೆ: ಒಬ್ಬ ಲೋಕಲ್ ಮುಬಲ್ಲಿಗರೊಂದಿಗೆ ನಾನು ಒಂದು ಗ್ರಾಮಕ್ಕೆ ಹೋಗಿ ಅಲ್ಲಿನ ಜನರಿಗೆ ಮಸೀಹ್ ಮೌಊದ್ ಮತ್ತು ಇಮಾಮ್ ಮಹ್‌ದಿ ಬಗ್ಗೆ ವಿವರಿಸಿ ಹೇಳಿದ್ದೆ. ನಾವು ಆ ಗ್ರಾಮಕ್ಕೆ ಎರಡನೆಯ ಸಾರಿ ಭೇಟಿ ನೀಡಿದಾಗ ಆ ಗ್ರಾಮದ ಮಸ್‌ಜಿದ್‌ನ ಇಮಾಮ್ ಸಮೇತ ಹದಿನೈದು ಜನರು ಬೈಅತ್ ಮಾಡಿದರು. ಈ ತಿಂಗಳಲ್ಲಿ ಖುದ್ದಾಮುಲ್ ಅಹ್ಮದಿಯಾದ ನೇಶನಲ್ ಇಜ್ತಿಮಾ ಆಬೀಜಾನ್‌ನಲ್ಲಿ ಜರಗಲಿದೆ ಎಂದು ಹೇಳಿದಾಗ ಆ ಗ್ರಾಮದ ಜನರು ಹೇಳಿದರು: ನಾವು ಆಬೀಜಾನ್‌ಗೆ ಒಬ್ಬನನ್ನು ಕಳುಹಿಸುವೆವು. ಆ ವ್ಯಕ್ತಿ ಅಲ್ಲಿ ಅಹ್ಮದಿಯರನ್ನು ಸಮೀಪದಿಂದ ಕಂಡು ಅವರು ಎಂತಹ ಜನರೆಂದು ತಿಳಿದುಕೊಂಡು ನಮಗೆ ವಿವರ ನೀಡಲಿ. ಹಾಗೆ ಆ ಗ್ರಾಮದ ಒಬ್ಬ ವ್ಯಕ್ತಿ ಇಜ್ತಿಮಾದಲ್ಲಿ ಭಾಗವಹಿಸಿ ಆಬೀಜಾನ್‌ನಲ್ಲಿ ಕಂಡದ್ದನ್ನು ಅವರಿಗೆ ವಿವರಿಸಿದರು. ಅಹ್ಮದಿಯರು ಎಷ್ಟು ಪ್ರೀತಿಯಿಂದಲೂ ಭ್ರಾತೃಭಾವದಿಂದಲೂ ವರ್ತಿಸುತ್ತಾರೆಂದು ಆ ವ್ಯಕ್ತಿ ವಿವರಿಸಿದರು.

ಪುನಃ ಮುಬಲ್ಲಿಗರು ಆ ಗ್ರಾಮಕ್ಕೆ ಹೋದಾಗ ಅಲ್ಲಿ ಇಶಾ ನಮಾಝ್ ನಂತರ ಮತ್ತು ಸುಬ್‌ಹ್ ನಮಾಝ್ ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಬಗ್ಗೆ ಪ್ರಶ್ನೋತ್ತರಗಳ ಕಾರ್ಯಕ್ರಮಗಳು ನಡೆದುವು. ಇದು ದೀರ್ಘ ಸಮಯ ಮುಂದುವರಿಯಿತು. ಅನಂತರ ಅಲ್ಲಿ 26 ಜನರು ಬೈಅತ್ ಮಾಡಿದರು. ಹೀಗೆ ಒಟ್ಟಿಗೆ 41 ಜನರ ಒಂದು ಹೊಸ ಜಮಾಅತ್ ಅಲ್ಲಿ ಸ್ಥಾಪಿತವಾಯಿತು.

ವಿರೋಧಿಗಳ ದುರ್ಗತಿ ಮತ್ತು ಅಲ್ಲಾಹನ ಸಹಾಯದ ಒಂದು ಘಟನೆಯನ್ನು ವಿವರಿಸುತ್ತಾ ಬೆನಿನ್ ದೇಶದ ಮುಬಲ್ಲಿಗ್ ಹೀಗೆ ಬರೆಯುತ್ತಾರೆ: ನನ್ನ ಪ್ರದೇಶದ ಎರಡು ದೊಡ್ಡ ರೇಡಿಯೋ ಸ್ಟೇಷನ್‌ಗಳಿಂದ ವಾರಕ್ಕೊಮ್ಮೆ ಜಮಾಅತಿನ ತಬ್ಲೀಗೀ ಕಾರ್ಯಕ್ರಮ ಪ್ರಸಾರವಾಗುತ್ತಿದೆ. ಒಂದು ರೇಡಿಯೋ ಸ್ಟೇಷನ್‌ನಿಂದ ಪ್ರತಿ ಬುಧವಾರ 30 ನಿಮಿಷಗಳ ಕಾರ್ಯಕ್ರಮ ಪ್ರಸಾರವಾಗುತ್ತಿತ್ತು. ಆದರೆ ಈ ರೇಡಿಯೋ ಚ್ಯಾನಲ್‌ನ ವೈಸ್ ಡೈರೆಕ್ಟರ್ ನಮ್ಮನ್ನು ವಿರೋಧಿಸುತ್ತಿದ್ದರು. ನಮ್ಮ ಕಾರ್ಯಕ್ರಮಗಳನ್ನು ತಡೆಯೊಡ್ಡಲು ಪ್ರಯತ್ನಿಸುತ್ತಿದ್ದರು. ಆದರೆ ಅಲ್ಲಾಹನ ಪ್ರವೃತ್ತಿ ನೋಡಿರಿ, ಈ ವ್ಯಕ್ತಿಯ ಭ್ರಷ್ಟಾಚಾರದ ಕಾರಣ ನ್ಯಾಯಾಲಯ ಅವರಿಗೆ ಸೆರೆಮನೆ ವಾಸದ ಶಿಕ್ಷೆ ವಿಧಿಸಿತು. ಹೊಸದಾಗಿ ಬಂದ ವೈಸ್ ಡೈರೆಕ್ಟರ್‌ರನ್ನು ನಾವು ನಮ್ಮ ಮಿಶನ್ ಹೌಸಿಗೆ ಕರೆದು ಜಮಾಅತಿನ ಬಗ್ಗೆ ಮತ್ತು ಇಸ್ಲಾಮಿನ ನಂಬಿಕೆಗಳ ಬಗ್ಗೆ ವಿವರಿಸಿದೆವು. ಓದಲು ಸಾಹಿತ್ಯ ಸಹ ನೀಡಿದೆವು. ನಮ್ಮ ತಬ್ಲೀಗ್‌ನ ಉದ್ದೇಶ ವಿವರಿಸಿದೆವು. ನಂತರ ಕೆಲವು ಕಾಲ ಅವರು ನಮ್ಮ ಕಾರ್ಯಕ್ರಮ ಆಲಿಸುತ್ತಿದ್ದರು. ಒಮ್ಮೆ ಅವರನ್ನು ಭೇಟಿಯಾದಾಗ ಅವರು ಹೇಳಿದರು: ನಿಮ್ಮ ತಬ್ಲೀಗ್‌ನಿಂದ ನಾನು ಬಹಳ ಪ್ರಭಾವಿತನಾಗಿದ್ದೇನೆ. ನೀವು ತಬ್ಲೀಗ್

ಮಾಡುವ ರೀತಿ ಬಹಳ ಮನೋಹರವಾಗಿದೆ. ನೀವು ವಾರದ ಒಂದು ಕಾರ್ಯಕ್ರಮ ಬಿತ್ತರಿಸಲು ನೀಡುವ ಹಣಕ್ಕೆ ಇನ್ನೊಂದು ಕಾರ್ಯಕ್ರಮ ಉಚಿತವಾಗಿ ವಾರಕ್ಕೊಮ್ಮೆ ಬಿತ್ತರಿಸಲು ಸ್ಥಿರವಾಗಿ ನಿಮಗೆ ಅನುಮತಿ ನೀಡುತ್ತೇನೆ. ಆ ಮೂಲಕ ನೈಜ ಧಾರ್ಮಿಕ ಉಪದೇಶಗಳ ಬಗ್ಗೆ ಜನರಲ್ಲಿ ಜ್ಞಾನವುಂಟಾಗಲಿ. ಮತ್ತು ಇಸ್ಲಾಮಿನ ಬಗ್ಗೆ ತಪ್ಪು ನಂಬಿಕೆಗಳು ನಿವಾರಿಸಲ್ಪಡಲಿ ಎಂದು ಹೇಳಿದರು. ನಮಗೆ ಕಾರ್ಯಕ್ರಮಗಳನ್ನು ಜಾರಿಯಲ್ಲಿರಿಸುವ ಬಗ್ಗೆ ಚಿಂತೆ ಇರುವಾಗ ಅಲ್ಲಾಹನು ಹೇಗೆ ಅನುಗ್ರಹ ನೀಡಿದನೆಂದರೆ ಮೊದಲು ಮಾಡುತ್ತಿದ್ದ ಖರ್ಚಿನಲ್ಲಿಯೇ ಇನ್ನಷ್ಟು ಹೆಚ್ಚು ಸಮಯ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮತ್ತು ಇಸ್ಲಾಮಿನ ನೈಜ ತತ್ವಗಳನ್ನು ಜನರಿಗೆ ತಲಪಿಸಲು ಸಂದರ್ಭ ಲಭಿಸಿತು.

ಅಲ್ಲಾಹನು ಜನರ ಹೃದಯಗಳನ್ನು ಸ್ವತಃ ತೆರೆಯುವ ಬಗ್ಗೆ ಇನ್ನೊಂದು ಘಟನೆ ಹೀಗಿದೆ: ಈಜಿಪ್ಟಿನ ಅಹ್ಮದ್ ಸಾಹೇಬ್ ಹೇಳುತ್ತಾರೆ: ಇಸ್ಲಾಮ್ ಬಗ್ಗೆ ಸರಿಯಾದ ವಿವರಣೆಯನ್ನು ಸರಳವಾದ ರೀತಿಯಲ್ಲಿ ನೀವು ನೀಡಿದ ಬಗ್ಗೆ ನಾನು ನಿಮಗೆ ಶುಭಾಶಯ ಕೋರುತ್ತೇನೆ. ನೀವು ಪ್ರತಿಪಾದಿಸುತ್ತಿರುವುದು **ರಹ್ಮತುನ್ ಲಿಲ್ ಆಲಮೀನ್** (ಸರ್ವಲೋಕಕ್ಕೆ ಅನುಗ್ರಹವಾದ) ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನೈಜ ಇಸ್ಲಾಮನ್ನಾಗಿದೆ. ನಾವು ದಾಯಿಶ್(IS) ಮತ್ತು ಅದರ ಕೃತ್ಯಗಳಿಂದ ಬಳಲಿ ಹೋಗಿದ್ದೇವೆ. ನಮ್ಮೆಲ್ಲರ ಯೋಚನೆಗಳು ತಮ್ಮ ಹಾಗೆ ಆಗುತ್ತಿದ್ದರೆ ಎಷ್ಟು ಉತ್ತಮವಾಗುತ್ತಿತ್ತು. ಅವರು ಹೇಳುತ್ತಾರೆ: ನಿಮ್ಮ ಕಾರ್ಯಕ್ರಮಗಳಲ್ಲಿ ವಿವರಿಸಿದ ರೀತಿಯಲ್ಲಿ ನಾನು ಎರಡು ರಕಅತ್ ಇಸ್ತಿಖಾರ ನಮಾಝ್ ನಿರ್ವಹಿಸಿದೆ. ಅದೇ ರಾತ್ರಿ ನಾನು ಸ್ವಪ್ನದಲ್ಲಿ ಹೀಗೆ ಕಂಡೆನು. ನನ್ನ ಮನೆಯ ಮುಂದೆ ಇರುವ ಎಲ್ಲ ಮನೆಗಳು ದೂರ ಸರಿಯುತ್ತಿವೆ. ಹಾಗೆ ನನ್ನ ಮನೆಯ ಮುಂದಿನ ಸ್ಥಳ ಖಾಲಿಯಾಯಿತು. ಅನಂತರ ನೀವು ನಿಮ್ಮ ಕಾರ್ಯಕ್ರಮಗಳಲ್ಲಿ ತೋರಿಸುವ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಿವಾಸವನ್ನು ಅಲ್ಲಿ ನಾನು ಕಂಡೆನು. ಎಂದರೆ ಖಾದಿಯಾನಿನ ದಾರುಲ್ ಮಸೀಹ್, ಭೂಮಿಯಿಂದ ಒಂದು ಗಿಡದ ಹಾಗೆ ಮೇಲೆ ಏರುವುದನ್ನು ಕಂಡೆನು. ಇದು ಯಾವ ರೀತಿ ಸಂಭವಿಸುತ್ತಿದೆ ಎಂದು ನಾನು ಗಾಬರಿಗೊಂಡು ನೋಡುತ್ತಿದ್ದೆ. ಅನಂತರ ಆ ಭವನದಿಂದ ಪ್ರಕಾಶ ಹೊರಹೊಮ್ಮುತ್ತಿರುವುದಾಗಿ ಕಂಡೆನು. ಆಗ ಜನರು "ಚಂದ್ರ ಹಗಲಿನಲ್ಲಿ ಉದಿಸಿದ" ಎಂದು ಹೇಳುತ್ತಿರುವುದಾಗಿ ನಾನು ಆಲಿಸಿದೆ. ನಾನು ಹಿಂದೆ ತಿರುಗಿ ನೋಡಿದಾಗ ಸೂರ್ಯೋದಯವಾಗುತ್ತಿತ್ತು. ನಾನು ಜನರೊಂದಿಗೆ ಹೇಳಿದೆ ಸೂರ್ಯ ಮತ್ತು ಚಂದ್ರ ಎರಡೂ ಉದಿಸಿವೆ ಎಂದು. ನಾನು ಬಹಳ ಸಂತೋಷಗೊಂಡೆನು. ಏಕೆಂದರೆ ನಾನು ಮೊದಲನೆಯ ಸಲ ಇಸ್ತಿಖಾರ ಪ್ರಾರ್ಥನೆ ಮಾಡಿದಾಗಲೇ ಅಲ್ಲಾಹನಿಂದ ಉತ್ತರ ಪಡೆದೆ. ನಾನು ಮೊದಲೇ ಮುಸ್ಲಿಮನಾಗಿದ್ದರೂ ಅಲ್ಲಾಹನ ಸಾಮೀಪ್ಯವನ್ನು ಈಗ ಗಳಿಸಿ ಭಯಭಕ್ತಿಯುಳ್ಳವನಾಗಿದ್ದೇನೆ. ಇದು ಅಹ್ಮದಿಯಾ ಜಮಾಅತಿನ ಕಾರಣದಿಂದ ಮಾತ್ರವಾಗಿದೆ. ನಾನು ತಮಗೆಲ್ಲರಿಗೂ ಕೃತಜ್ಞನಾಗಿದ್ದೇನೆ.

ಅಲ್ಲಾಹನು ಸ್ವಪ್ನದ ಮೂಲಕ ಹೇಗೆ ಮಾರ್ಗದರ್ಶನ ನೀಡುತ್ತಾನೆ ಎನ್ನುವುದರ ಬಗ್ಗೆ ಯಮನ್ ದೇಶದ ಈಮಾನ್ ಸಾಹಿಬ ಎಂಬ ಮಹಿಳೆ ಹೇಳುತ್ತಾರೆ: ನಾನು ಯುವತಿಯಾಗಿದ್ದ ಕಾಲದಿಂದಲೇ ನನಗೆ ಇಮಾಮ್ ಮಹ್‌ದಿ ಆಗಮಿಸುವ ಕಾಲದ ತನಕ ಜೀವಿಸಿರುವ ಅಭಿಲಾಷೆ ಇತ್ತು. ನಾನು ಅದರ ಬಗ್ಗೆ ಪ್ರಾರ್ಥನೆ ಸಹ ಮಾಡುತ್ತಿದ್ದೆ. ಒಂದು ದಿವಸ ನಾನೊಂದು ಅರಬಿ ಭಾಷೆಯ ಚ್ಯಾನಲ್ ನೋಡುತ್ತಿದ್ದೆ. ಅದರಲ್ಲಿ ಒಂದು ಧಾರ್ಮಿಕ ಕಾರ್ಯಕ್ರಮದಲ್ಲಿ ಒಬ್ಬನು ಅಹ್ಮದಿಯಾ ಜಮಾಅತಿನ ಹೆಸರು ಹೇಳದೆ ಒಬ್ಬ ಪ್ರಸಿದ್ಧ ಮೌಲವಿಯೊಂದಿಗೆ ಹೀಗೆ ಪ್ರಶ್ನೆ ಕೇಳಿದನು: ಒಂದು ಜಮಾಅತ್ ಹೇಳುತ್ತಿದೆ ಇಮಾಮ್ ಮಹ್‌ದಿ ಆಗಮಿಸಿರುವರೆಂದು. ಅವರ ನಂತರ ಖಿಲಾಫತ್ ಸ್ಥಾಪಿತವಾಗಿದೆ ಎಂದೂ ಹೇಳುತ್ತಾರೆ. ಆಗ ಆ ಮೌಲವಿ ಹೇಳಿದರು– ಆ ಜನರು ಮಿಥ್ಯ ಭಾವನೆಗಳಿಗೆ ಪಾತ್ರರಾದ ಸುಳ್ಳುಗಾರರಾಗಿದ್ದಾರೆ. ನೀವು ಅಂತಹ ವಿಷಯಗಳಲ್ಲಿ ಸಿಲುಕಿಕೊಳ್ಳದೆ ನಿಮ್ಮ ಸಾಮಾನ್ಯ ಜೀವಿತವನ್ನು ಮುಂದುವರಿಸಿರಿ. ಏಕೆಂದರೆ ಇಮಾಮ್ ಮಹ್‌ದಿ ಆಗಮಿಸಿದರೆ ಅದು ಎಲ್ಲರಿಗೂ ತಿಳಿಯುವುದು. ಅವರನ್ನು ಹುಡುಕುವ ಆವಶ್ಯಕತೆ ಇರಲಾರದು.

ನನ್ನ ಮನಸ್ಸಿನಲ್ಲಿ ಮೌಲವಿಯ ಈ ಮಾತು ನೆಲೆ ನಿಂತಿತ್ತು. ಅನಂತರ 2009ರಲ್ಲಿ ನನ್ನ ಚಿಕ್ಕ ಸಹೋದರ ಹೀಗೆ ಹೇಳಿದ: ನಾನು ಒಂದು ಚ್ಯಾನಲ್ ನೋಡಿದೆ. ಅದರಲ್ಲಿ ಕೆಲವರು ಇಮಾಮ್ ಮಹ್‌ದಿಯ ಆಗಮನವನ್ನು ಪ್ರಕಟಿಸುತ್ತಿದ್ದಾರೆ. ಈ ಮಾತನ್ನು ಆಲಿಸಿದಾಗ ಮೌಲವಿ ಸಾಹೇಬರೊಂದಿಗೆ ಕೇಳಿದ ಪ್ರಶ್ನೆ ಮತ್ತು ಅವರ ಉತ್ತರ ನನ್ನ ನೆನಪಿಗೆ ಬಂತು. ಅದು ಈ ಜಮಾಅತ್ ಬಗ್ಗೆ ಆಗಿರಬಹುದು ಎಂದು ನಾನು ಯೋಚಿಸಿದೆ. ನಾನು ಆ ಚ್ಯಾನಲ್‌ನ ಫ್ರೀಕ್ವೆನ್ಸಿಯನ್ನು ನನ್ನ ಸಹೋದರನಿಂದ ಪಡೆದೆ. ನಾನು ಆ ಚ್ಯಾನಲ್ ವೀಕ್ಷಿಸಿದಾಗ ಅಲ್ಲಿ **ಅಲ್‌ಜವಾರುಲ್ ಮುಬಾಶಿರ್** ಕಾರ್ಯಕ್ರಮ ಜಾರಿಯಲ್ಲಿತ್ತು. ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಪ್ರತಿಯೊಬ್ಬ ವ್ಯಕ್ತಿಯನ್ನು ನಾನು ಗಾಢವಾದ ದೃಷ್ಟಿಯಿಂದ ನೋಡಿದೆ. ಅವರೆಲ್ಲರ ಮುಖದಲ್ಲಿ ವಿಸ್ಮಯಕರವಾದ ಹೊಳಪು ಮತ್ತು ಪ್ರಕಾಶವಿತ್ತು. ಆದರೆ ನನಗೆ ಅವರ ಬಗ್ಗೆ ಖೇದ ಉಂಟಾಯಿತು. ಅವರು ಇಷ್ಟು ಬುದ್ಧಿಶಾಲಿಗಳಾಗಿದ್ದರೂ ದಾರಿ ತಪ್ಪಿರುವರೆಂದು ನಾನು ಹೇಳಿದೆ. ಈಗ ನಮ್ಮಲ್ಲಿ ಐಕ್ಯತೆಯ ಆವಶ್ಯಕತೆಯಿದೆ. ಆದರೆ ಇವರು ಬಂದು ಇನ್ನೊಂದು ಪಂಗಡವನ್ನು ಸೃಷ್ಟಿಸಿದ್ದಾರೆ. ಏನು ಇಸ್ಲಾಮಿನಲ್ಲಿ ಪಂಗಡಗಳಿಗೆ ಕೊರತೆ ಇತ್ತಾ? ನಾನು ಹೀಗೆ ಯೋಚಿಸಿದರೂ ಅವರ ಮಾತುಗಳು ನನ್ನ ಹೃದಯಕ್ಕೆ ನಾಟಿದ್ದುವು. ಕಾರ್ಯಕ್ರಮದ ಕೊನೆಗೆ ಒಂದು ಖಸೀದ ಬಿತ್ತರಿಸಲಾಯಿತು. ಅದು ಇಮಾಮ್ ಮಹ್‌ದಿ ಬರೆದುದು ಎಂದು ಪ್ರಕಟಿಸಲಾಯಿತು. ಈ ಖಸೀದದ ಶಬ್ದಗಳು ಮತ್ತು ಪ್ರಭಾವ ಅಸಾಧಾರಣವಾಗಿತ್ತು. ನಾನು ನನ್ನ ಪತಿಯೊಂದಿಗೆ ಈ ಚ್ಯಾನಲ್ ನೋಡಲು ಪ್ರಾರಂಭಿಸಿದೆ. ನಮ್ಮ ಮನೆಯಲ್ಲಿರುವ ಪ್ರತಿಯೊಬ್ಬರು ಈ ಚ್ಯಾನಲ್‌ನಲ್ಲಿ ವಿವರಿಸಲಾಗುವ ವಿಷಯಗಳನ್ನು ಇಷ್ಟಪಡಲು ತೊಡಗಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು

ಬಳಸಿದ ಪದಗಳ ಪ್ರಭಾವ ಆಶ್ಚರ್ಯಕರವಾಗಿದ್ದುವು. ಅವರ ಖಸೀದ ಆಲಿಸಿದಾಗ ನನಗೆ ಅಳು ಬರುತ್ತಿತ್ತು. ಏಕೆಂದರೆ ಅಂತಹ ಪದಗಳು ಒಬ್ಬ ದೇವ ನಿಯೋಜಿತರ ಬಾಯಿಯಿಂದ ಮಾತ್ರ ಹೊರಡಬಹುದಾಗಿತ್ತು. ಒಬ್ಬ ಸಾಮಾನ್ಯ ವ್ಯಕ್ತಿ ಇಂತಹ ಪ್ರಭಾವಶಾಲಿ ಪದಗಳನ್ನು ಬಳಸಲಾರ. ಎಲ್ಲ ವಿಷಯಗಳ ಬಗ್ಗೆ ಸಮಾಧಾನ ಗಳಿಸಿದ ನಂತರ 2010 ಜನವರಿ ತಿಂಗಳಲ್ಲಿ ನಾನು ಬೈಅತ್ ಬಗ್ಗೆ ಪತ್ರ ಬರೆದೆ. ನನ್ನ ಪತಿ ಇಂಟರ್‌ನೆಟ್ ಮೂಲಕ ಪತ್ರ ರವಾನಿಸಲು ಹಲವು ಸಾರಿ ಪ್ರಯತ್ನಿಸಿದರೂ ರವಾನಿಸಲು ಸಾಧ್ಯವಾಗಲಿಲ್ಲ. ಆಗ ನನಗೆ ನನ್ನ ಬಾಲ್ಯ ಕಾಲದ ಒಂದು ಸ್ವಪ್ನ ನೆನಪಿಗೆ ಬಂತು. ನೀರಿಲ್ಲದ ಬರಡು ಭೂಮಿಯಲ್ಲಿ ನಾನು ನಿಂತಿರುವಾಗ ನನ್ನ ಮುಂದೆ ಒಂದು ಉದ್ದವಾಗಿರುವ ನೆರಳು ಕಾಣಿಸುತ್ತಿದೆ. ಆಗ ಸ್ವಪ್ನದಲ್ಲಿ ನಾನು ಯೋಚಿಸುತ್ತೇನೆ. ಇದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನೆರಳಾಗಿದೆ ಎಂದು. ಈ ನೆರಳು ನನ್ನ ಕಡೆಗೆ ಕೈಚಾಚುತ್ತಿದೆ. ಅದನ್ನು ಹಿಡಿಯಲು ನಾನು ಓಡುತ್ತಿದ್ದೇನೆ. ಆಗ ನಾನು ಹಲವು ಸಾರಿ ಬಿದ್ದು ಬಿಡುತ್ತೇನೆ. ಪುನಃ ಎದ್ದು ಓಡುತ್ತೇನೆ. ಆಗ ನನಗೆ ಎಚ್ಚರವಾಗುತ್ತದೆ. ಈ ಸ್ವಪ್ನದ ಬಗ್ಗೆ ನನ್ನ ಅಭಿಪ್ರಾಯವೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನೆರಳು ಎಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಆಗಿದ್ದಾರೆ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನೆರಳಿನ ರೂಪದ ಪ್ರತಿಬಿಂಬ ಆಗಿದ್ದಾರೆ. ಮತ್ತು ಝಿಲ್ಲೀನಬಿ ಆಗಿದ್ದಾರೆ. ಅವರ ಕೈಯಲ್ಲಿ ಬೈಅತ್ ಮಾಡಲು ಭಾಗ್ಯ ದೊರೆತಿರುವುದು ಅಲ್ಲಾಹನ ಅನುಗ್ರಹವಾಗಿದೆ. ಹಲವು ಸಾರಿ ಪ್ರಯತ್ನ ಮಾಡಿದ ನಂತರ 2010 ಮಾರ್ಚ್ ತಿಂಗಳಲ್ಲಿ ಬೈಅತ್ ಪತ್ರ ರವಾನಿಸಲು ಸಾಧ್ಯವಾಯಿತು. ನಾವು ಬೈಅತ್ ಮಾಡಿದ ನಂತರ ಅಲ್ಲಾಹನ ಅನುಗ್ರಹಗಳು ಮಳೆಯ ಹಾಗೆ ಸುರಿಯುತ್ತಿವೆ. ನಾವು ಎಂತಹ ಆಶ್ಚರ್ಯಕರ ದೈವಿಕ ಶಕ್ತಿ ಸಾಮರ್ಥ್ಯಗಳನ್ನು ಕಾಣುತ್ತಿದ್ದೇವೆ ಎಂದರೆ ಅವುಗಳನ್ನು ವಿವರಿಸಲು ನನಗೆ ಸಾಧ್ಯವಿಲ್ಲ. ಅಲ್ಲಾಹನು ಬಹಳ ಅದ್ಭುತಕರ ಸಾಮರ್ಥ್ಯವಂತನಾಗಿದ್ದಾನೆ. ನಾನು ಪ್ರಾರ್ಥಿಸಿದಾಗಲೆಲ್ಲಾ ಅವು ಅಂಗೀಕಾರವಾದ ಚಿಹ್ನೆಗಳನ್ನು ನೋಡಿದ್ದೇನೆ. ನಮ್ಮ ದೇವನು ಅತ್ಯಂತ ಕರುಣಾಮಯಿಯಾಗಿದ್ದಾನೆ. ನಿಮ್ಮ ಮತ್ತು ಎಲ್ಲ ಸತ್ಯವಿಶ್ವಾಸಿಗಳ ಮೇಲಿನ ಪ್ರೀತಿ, ನನ್ನ ಹೃದಯದಲ್ಲಿ ನನ್ನ ಆತ್ಮಕ್ಕಿಂತಲೂ, ಕುಟುಂಬ ಮತ್ತು ಮಕ್ಕಳಿಗಿಂತಲೂ ಎಲ್ಲ ಜನರಿಗಿಂತಲೂ ತಂಪು ನೀರಿಗಿಂತಲೂ ಹೆಚ್ಚು ಪ್ರಿಯವಾಗಿದೆ.

ಒಟ್ಟಿನಲ್ಲಿ, ವಿರೋಧಗಳು ನಡೆಯುತ್ತಿದ್ದರೂ, ಶತ್ರುಗಳು ಶೈತಾನಿ ಆಕ್ರಮಣ ಮಾಡುತ್ತಿದ್ದರೂ ಅಲ್ಲಾಹನು ಸಾತ್ವಿಕರಾದ ಜನರಿಗೆ ಮಾರ್ಗದರ್ಶನ ನೀಡುತ್ತಿದ್ದಾನೆ. ಅವರ ಹೃದಯಗಳನ್ನು ತೆರೆಯುತ್ತಿದ್ದಾನೆ. ಮತ್ತು ಅಹ್ಮದಿಯತ್ತಿಗೆ ಸೇರುವ ಭಾಗ್ಯ ನೀಡುತ್ತಿದ್ದಾನೆ. ಅಲ್ಲಾಹನು ಸ್ವತಃ ಕೈ ಹಿಡಿದು ಅಹ್ಮದಿಯಾ ಜಮಾಅತಿಗೆ ಸೇರಲು ಭಾಗ್ಯ ನೀಡಿದ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ನೆರವು ನೀಡಿದ ದೃಶ್ಯಗಳನ್ನು ತೋರಿಸುವ ಅಸಂಖ್ಯಾತ ಘಟನೆಗಳು ಇವೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೀಗೆ ಹೇಳಿದ್ದಾನೆ: **ಖುದಾ ತೇರೇ ನಾಮ್ ಕೋ ಉಸ್ ರೋಝ್‌ತಕ್ ಜೋ ದುನ್‌ಯಾ ಮುನ್‌ಖತಅ್ ಹೋಜಾಯೆ ಇಝ್ಝತ್ ಕೆ ಸಾಥ್ ಖಾಯಿಮ್ ರಖೇಗ ಔರ್ ತೇರೀ ದಅ್‌ವತ್ ಕೋ ಝುಮೀನ್ ಕೆ ಕಿನಾರೋಂ ತಕ್ ಪಹುಂಚಾದೇಗ.** (ಲೋಕಾಂತ್ಯದ ತನಕ ನಿನ್ನ ಹೆಸರನ್ನು ಗೌರವ ಪೂರ್ಣವಾಗಿ ಅಲ್ಲಾಹನು ನೆಲೆನಿಲ್ಲಿಸುವನು. ನಿನ್ನ ಸಂದೇಶವನ್ನು ಭೂಮಿಯ ಅಂಚುಗಳ ತನಕ ತಲಪಿಸುವನು). ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ: **ಓ ಲೋಗ್ ಜೋ ತೇರೀ ಝಿಲ್ಲತ್ ಕಿ ಫಿಕ್ರ್ ಮೇ ಲಗೇ ಹುಯೇಹ್ಯೆಂ ಔರ್ ತೇರೇ ನಾಕಾಮ್ ರಹ್ನೇ ಕೆ ದರ್‌ಪೇ ಔರ್ ತೇರೇ ನಾಬೂದ್ ಕರ್‌ನೇಕೆ ಖಿಯಾಲ್‌ಮೇ ಹ್ಯೆಂ, ಓ ಖುದ್ ನಾಕಾಮ್ ರಹೇಂಗೆ ಔರ್ ನಾಕಾಮೀ ವ ನಾಮುರಾದೀ ಸೆ ಮರೇಂಗೆ.** (ನಿನ್ನನ್ನು ಅಪಮಾನಿತನನ್ನಾಗಿ ಮಾಡಲು ಚಿಂತಿಸುತ್ತಿರುವವರು, ನೀನು ಸೋತು ಹೋಗಬೇಕೆಂದು ಇಚ್ಛಿಸುವವರು, ಮತ್ತು ನಿನ್ನನ್ನು ನಾಶಮಾಡಬೇಕೆಂದು ಯೋಚಿಸುವವರು ಸ್ವತಃ ಸೋತು ಹೋಗುವರು. ಅವರು ಅಪಜಯ ಹೊಂದಿದವರೂ ಇಚ್ಛಾಭಂಗವಾದವರೂ ಆಗಿ ಸಾಯುವರು).

ಆದುದರಿಂದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮಾಡಿದ ಅಸಂಖ್ಯಾತ ವಾಗ್ದಾನಗಳು ಈಡೇರಿವೆ ಎಂದು ನಾವು ಕಾಣುತ್ತಿರುವಾಗ, ಇನ್‌ಶಾಅಲ್ಲಾಹ್– ಅಲ್ಲಾಹನು ನೀಡಿದ ಈ ಜಮಾಅತ್ ಬಹುಸಂಖ್ಯಾತರಾಗುವುದೆಂಬ ವಾಗ್ದಾನವೂ ಈಡೇರುವುದನ್ನು ನಾವು ಕಾಣಲಿರುವೆವು. ಆವಶ್ಯಕವಾದುದೇನೆಂದರೆ ನಾವು ಅಲ್ಲಾಹನ ಅನುಗ್ರಹಗಳನ್ನು ಗಳಿಸಲು ನಮ್ಮ ನಿಷ್ಠೆಯನ್ನು ವರ್ಧಿಸಬೇಕು. ಆ ಮೂಲಕ ಅಲ್ಲಾಹನ ಅನುಗ್ರಹಗಳ ವಾರೀಸುದಾರರಾಗಬಹುದು. ಅಲ್ಲಾಹನು ನಮಗೆ ಆ ಭಾಗ್ಯವನ್ನು ದಯಪಾಲಿಸುವವನಾಗಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಏನು, ನಮ್ಮ ವಿರೋಧಿಗಳು ತಮ್ಮ ಯೋಜನೆಗಳ ಮೂಲಕ, ತಮ್ಮ ನಿರಾಧಾರ ಸುಳ್ಳುಗಳ ಮೂಲಕ, ತಮ್ಮ ಸುಳ್ಳು ಸೃಷ್ಟಿಗಳ ಮೂಲಕ ಹಾಗೂ ಅಪಹಾಸ್ಯ ಮತ್ತು ನಗುವಿನ ಮೂಲಕ, ಅಲ್ಲಾಹನ ನಿರ್ಧಾರವನ್ನು ತಡೆಗಟ್ಟಬಹುದೆಂದು ಯೋಚಿಸುತ್ತಿದ್ದಾರೆಯೇ? ಅಥವಾ ಲೋಕವನ್ನು ಮೋಸಕ್ಕೊಳಪಡಿಸಿ ಅದನ್ನು ನಿರಾಸಕ್ತವನ್ನಾಗಿ ಮಾಡಬಹುದೆಂದು ಭಾವಿಸುತ್ತಿದ್ದಾರೆಯೇ? ಅಲ್ಲಾಹನು ಆಕಾಶದಲ್ಲಿ ನಿರ್ಧರಿಸಿದ್ದಾನೆ. ಇದರ ಮೊದಲು ಸತ್ಯದ ವಿರೋಧಿಗಳು ಎಂದಾದರೂ ಜಯಶಾಲಿಗಳಾಗಿದ್ದರೆ ಈಗ ಇವರು ಸಹ ಜಯಶಾಲಿಗಳಾಗುವರು. ಆದರೆ ಅಲ್ಲಾಹನ ವಿರೋಧಿಗಳು, ಅಲ್ಲಾಹನು ಆಕಾಶದಲ್ಲಿ ನಿರ್ಧರಿಸಿರುವುದನ್ನು ವಿರೋಧಿಸುವವರು, ಯಾವಾಗಲೂ ಸೋತು ಹೋಗಿ ಹೀನೈಸಲ್ಪಡುತ್ತಾರೆ ಎಂಬುದು ಸಾಬೀತಾದ ವಿಷಯವಾಗಿದೆ. ಅಲ್ಲಾಹನ ಮಾತುಗಳು ಎಂದೂ ತಪ್ಪಾಗಲಾರದು. ಪವಿತ್ರ ಖುರ್‌ಆನ್‌ನಲ್ಲಿ ಅವನು ಹೇಳಿದ್ದಾನೆ: **ಕತಬಲ್ಲಾಹು ಲಅಗ್‌ಲಿಬನ್ನ ಅನ ವ ರುಸುಲೀ.** ಅಲ್ಲಾಹನು ಆರಂಭದಿಂದಲೇ ಬರೆದಿಟ್ಟಿದ್ದಾನೆ– ಅದನ್ನು ತನ್ನ ನಿಯಮ ಮತ್ತು ನಡೆವಳಿಕೆ ಎಂದು ಹೇಳಿದ್ದಾನೆ– ಅವನು ಮತ್ತು ಅವನ ಸಂದೇಶವಾಹಕರು ಯಾವಾಗಲೂ

ಜಯಶಾಲಿಗಳಾಗುತ್ತಾರೆ ಎಂದು. ನಾನು ಅಲ್ಲಾಹನ ಸಂದೇಶವಾಹಕನಾಗಿದ್ದೇನೆ. ಆದರೆ ಹೊಸ ಶರೀಅತ್, ಹೊಸ ವಾದ ಮತ್ತು ಹೊಸ ಹೆಸರು ನನಗಿಲ್ಲ. ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರನ್ನು ಪಡೆದು ಅವರಲ್ಲಿಯೇ ಸೇರಿಕೊಂಡು ಅವರ ಪ್ರಕಟಣೆಗಾರನಾಗಿ ಆಗಮಿಸಿದ್ದೇನೆ. ಆದುದರಿಂದ ಆದಮರ ಕಾಲದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದ ತನಕ ಪವಿತ್ರ ಖುರ್‌ಆನಿನ ಈ ವಚನ ಸತ್ಯವಾಗಿ ಪ್ರಕಟವಾಗುತ್ತಾ ಇದ್ದ ಹಾಗೆ ಈಗ ನನ್ನ ಪರವಾಗಿ ಸಹ ಅದು ಸತ್ಯವಾಗಿ ಪ್ರಕಟವಾಗುವುದು – ಇನ್‌ಶಾಅಲ್ಲಾಹ್.

——————————*****——————————


***Friday Sermon delivered by Hadrath Khaleefatul Masih Al Khamis(atba)***

*At, Masjid Baithul Futhuh, London on 07-07-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon